# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ನಿವಾರಣಾ ಕಾಯ್ದೆಗಳು: ಒಂದು ಪುನರಾವಲೋಕನ

**ಮಾಧುರಿ ಚೌಗುಲೆ*** & **ಜಗದೀಶ ಅಸೋದೆ****

DOI: https://doi.org/10.5281/zenodo.19638142

**ABSTRACT**

ಡಾ. ಬಾಬಾಸಾಹೇಬರ ಮೂಕನಾಯಕ ಪತ್ರಿಕೆಯಲ್ಲಿ ಉಲ್ಲೇಖಿಸಿರುವಂತೆ ವಿಶ್ವದ ಎಲ್ಲಾ ದೇಶಗಳ ಸಾಮಾಜಿಕ ವ್ಯವಸ್ಥೆಯ ಕುರಿತು ಅಧ್ಯಯನ ಮಾಡಿದರೆ, ಭಾರತ ದೇಶವು ಮಾತ್ರ ಜಾತಿ ವ್ಯವಸ್ಥೆಯಿಂದ ಮುಕ್ತವಾಗಿರಲಿಲ್ಲ. ಭಾರತದಲ್ಲಿ ವರ್ಣ, ಜಾತಿ ಮತ್ತು ಅಸ್ಪೃಶ್ಯತೆಯ ಕಾರಣದಿಂದಾಗಿ ಮೇಲ್ವರ್ಗದವರಿಂದ ಕೆಳವರ್ಗದವರನ್ನು ಹೀನಾಯವಾಗಿ ಕಾಣುವುದು ಮತ್ತು ಅವರ ಮೇಲೆ ಜಾತಿಯ ಕಾರಣಕ್ಕಾಗಿ ಕ್ಷುಲ್ಲಕ ಕಾರಣಗಳಿಂದ ದೌರ್ಜನ್ಯಗಳನ್ನು ನಡೆಸುತ್ತಾರೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯಗಳನ್ನು ನಿವಾರಣೆ ಮಾಡಲು ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಸಂವಿಧಾನ ಮೂಲಕ ರಕ್ಷಣೆ ನೀಡಿದ್ದರು. ಭಾರತೀಯ ನಾಗರಿಕ ಕಾನೂನು 1955 ರ ಅಡಿಯಲ್ಲಿ ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಯುವ ಸಲುವಾಗಿ ಕಾನೂನು ಮಾಡಿದ್ದರು.

ಸಮಕಾಲೀನ ಸಂದರ್ಭದಲ್ಲಿ ಜಾತಿ ವ್ಯವಸ್ಥೆಯನ್ನು ಮುಕ್ತಮಾಡಲು ಇಲ್ಲಿಯವರೆಗೆ ಯಾವ ಸರ್ಕಾರಗಳು ಮುಂದಾಗಿಲ್ಲ ಅಂದರೆ ಜಾತಿಯನ್ನು ಮುಂದುವರೆಸುವುದರಿಂದ ಜಾತಿ ಗಲಭೆಗಳು ಇದ್ದಾಗ ಮಾತ್ರ ರಾಜಕೀಯವು ಸುರಕ್ಷೆಯಾಗಿರುತ್ತದೆ ಹಾಗೂ ಮತ ಬ್ಯಾಂಕ್ ನೀತಿಯಾಗಿದೆ. ಭಾರತೀಯ ಇತಿಹಾಸವನ್ನು ಅವಲೋಕನ ಮಾಡಿದಾಗ ನಮಗೆ ತಿಳಿಯುವುದೇನೆಂದರೆ ದೌರ್ಜನ್ಯಗಳು ಇತ್ತೀಚಿನಿಂದ ಅಲ್ಲ, ಇವು ಪ್ರಾಚೀನ ಕಾಲದಿಂದಲೂ ಜಾತಿ ತಾರತಮ್ಯದ ಕಾರಣದಿಂದಾಗಿ ಸಾಮಾಜಿಕ ಮತ್ತು ಧಾರ್ಮಿಕವಾಗಿ ಅವರನ್ನು

* **ಡಾ. ಮಾಧುರಿ ಚೌಗುಲೆ,** ಸಹಾಯಕ ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಡಾ. ಜಗದೀಶ ಅಸೋದೆ,** ಸಹಾಯಕ ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಊರ ಹೊರಗೆ ಇರುವಂತೆ ಮಾಡಿ ಅವರಿಗೆ ಯಾವುದೇ ಅಭಿವ್ಯಕ್ತಿ ಸ್ವಾತಂತ್ರ್ಯವೂ ಇರಲಿಲ್ಲ. ಒಂದು ವೇಳೆ ಅವರು ಏನಾದರೂ ಅವರ ವಿರುದ್ಧ ಹೋದರೆ ಕಠಿಣವಾದ ಶಿಕ್ಷೆಯನ್ನು ನೀಡುತ್ತಿದ್ದರು. ಮಹಾತ್ಮ ಫುಲೆ, ಶಾಹೂ ಮಹಾರಾಜ, ನಾರಾಯಣ ಗುರು, ಪೆರಿಯಾರ್ ರಾಮಸ್ವಾಮಿ, ನಾಲ್ವಡಿ ಕೃಷ್ಣರಾಜ ಒಡೆಯರ್‌ರಂತಹ ಮಹನೀಯರ ಹೋರಾಟದ ಫಲದಿಂದ ಹಾಗೂ ಡಾ. ಬಿ. ಆರ್. ಅಂಬೇಡ್ಕರ ಅವರು ನಿಜವಾದ ಸಾಮಾಜಿಕ ಸ್ವಾತಂತ್ರ್ಯ ನೀಡಲು ಹೋರಾಡಿದ್ದ ಮಹಾ ಪುರುಷ ಅವರು ರಚಿಸಿದಂತಹ ಸಂವಿಧಾನದಿಂದ ಇಂದು ಶೋಷಿತ ಸಮುದಾಯಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ) ನೆಮ್ಮದಿ ಜೀವನ ಸಾಧಿಸಲು ಕಾರಣವಾಗಿದೆ.

**KEYWORDS:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ದೌರ್ಜನ್ಯ ನಿವಾರಣಾ ಕಾಯ್ದೆ, ಸಂವಿಧಾನಾತ್ಮಕ ರಕ್ಷಣೆ, ಅಸ್ಪೃಶ್ಯತೆ ನಿವಾರಣೆ, ಸಾಮಾಜಿಕ ನ್ಯಾಯ.

---

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ:** 2011 ರ ಜನಗಣತಿಯ ಪ್ರಕಾರ ಭಾರತದ ಪಂಜಾಬ್‌ನಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯನ್ನು ಶೇಕಡಾ 32 ರಷ್ಟು ಅತಿ ಹೆಚ್ಚು ಹೊಂದಿದ್ದರೆ, ಕಡಿಮೆ ಪ್ರಮಾಣದಲ್ಲಿ ದ್ವೀಪ ಪ್ರದೇಶಗಳು ಮತ್ತು ಮೂರು ಈಶಾನ್ಯ ರಾಜ್ಯಗಳು ಶೇಕಡಾ 1 ರಷ್ಟು ಹೊಂದಿವೆ. ಅದೇ ರೀತಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯನ್ನು ಮಿಜೋರಾಂ ಮತ್ತು ಲಕ್ಷದ್ವೀಪದಲ್ಲಿ ಶೇಕಡಾ 95 ರಷ್ಟು ಹೊಂದಿದ್ದರೆ, ಪಂಜಾಬ್ ಮತ್ತು ಹರಿಯಾಣದಲ್ಲಿ ಶೇಕಡಾ 2 ರಷ್ಟು ಕಾಣಬಹುದು. ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಭಾರತದ ಅಧಿಕೃತವಾದ ಜನರ ಗುಂಪುಗಳಾಗಿವೆ. ಈ ನಿಯಮಗಳನ್ನು ಭಾರತದ ಸಂವಿಧಾನದಲ್ಲಿ ಗುರುತಿಸಲಾಗಿದೆ ಮತ್ತು ಗುಂಪುಗಳನ್ನು ಒಂದು ಅಥವಾ ಇನ್ನೊಂದು ವರ್ಗಗಳಲ್ಲಿ ಗೊತ್ತುಪಡಿಸಲಾಗಿದೆ. ಈ 2011ರ ಜನಗಣತಿಯ ಪ್ರಕಾರ ಭಾರತದ ವಿವಿಧ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಸಂಖ್ಯೆಯನ್ನು ಕೆಳಗಿನಂತೆ ಕಾಣಬಹುದಾಗಿದೆ. ಆಂಧ್ರ ಪ್ರದೇಶದಲ್ಲಿ 61, ಅಸ್ಸಾಂ 16, ಬಿಹಾರ 23, ಗುಜರಾತ್ 36, ಹರಿಯಾಣ 37, ಹಿಮಾಚಲ ಪ್ರದೇಶ 57, ಜಾರ್ಖಂಡ 22, ಕರ್ನಾಟಕ 101, ಕೇರಳ 69, ಮಧ್ಯ ಪ್ರದೇಶ 48, ಮಹಾರಾಷ್ಟ್ರ 59, ಮಣಿಪುರ 7, ಮೇಘಾಲಯ 16, ಒಡಿಶಾ 95, ಪಂಜಾಬ್ 39, ರಾಜಸ್ಥಾನ 59, ತಮಿಳುನಾಡು 76, ತ್ರಿಪುರಾ 34, ಉತ್ತರ ಪ್ರದೇಶ 66, ವೆಸ್ಟ್ ಬೆಂಗಾಲ್ 60, ಮಿಜೋರಾಂ 16, ಗೋವಾ 5, ಛತ್ತೀಸ್‌ಗಢ 44, ಉತ್ತರಾಖಂಡ 65, ತೆಲಂಗಾಣ 59, ದೆಹಲಿ 36, ಚಂಡಿಗಢ 36, ದಮನ್ ಮತ್ತು ದಿಯು 5, ಜಮ್ಮು ಮತ್ತು ಕಾಶ್ಮೀರ 13, ದಾದರ ಮತ್ತು ನಗರ ಹವೇಲಿ 4, ಪಾಂಡಿಚೇರಿ/ಪುದುಚೇರಿ 16 ಮತ್ತು ಸಿಕ್ಕಿಂ 4 ಈ ರೀತಿಯಾಗಿ ಪರಿಶಿಷ್ಟ ಜಾತಿಗಳ ಸಂಖ್ಯೆಯನ್ನು ವಿವಿಧ ರಾಜ್ಯಗಳಲ್ಲಿ ಕಾಣಬಹುದಾಗಿದೆ.

**ಬ್ರಿಟಿಷ್ ಕಾಲಾವಧಿಯ ಭಾರತ:** 19ನೇ ಶತಮಾನದ ಮಧ್ಯಭಾಗದ ವೇಳೆಗೆ,

ಇಡೀ ಭಾರತವು ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಗೆ ಒಳಪಟ್ಟಿತು. ಆಗ ಬ್ರಿಟಿಷರು ಭಾರತದ ಉಪಖಂಡವನ್ನು ಎರಡು ಆಡಳಿತ ವಿಭಾಗಗಳನ್ನಾಗಿ ಮಾಡಿಕೊಂಡರು. ಮೊದಲನೆಯದು ಬ್ರಿಟಿಷ್ ಭಾರತ ಮತ್ತು ಎರಡನೆಯದಾಗಿ ಭಾರತೀಯ 563 ಸಂಸ್ಥಾನದ ರಾಜ್ಯಗಳು ಸುಮಾರು ಭಾರತೀಯ ರಾಜಕುಟುಂಬಗಳು ತಮ್ಮದೇಯಾದ ರಾಜ್ಯಗಳನ್ನು ಆಳುತ್ತಿದ್ದರು. ಈ ಅರಸರಿಗೆ ಸೀಮಿತ ಸ್ವಾತಂತ್ರ್ಯವಿತ್ತು. ಇವರಲ್ಲಿ ಕೆಲವರಿಗೆ ತಮ್ಮದೇ ಆದ ಸ್ವಂತ ಸೈನ್ಯವಿರಲಿಲ್ಲ ಮತ್ತು ಇವರುಗಳು ಬ್ರಿಟಿಷ್ ಸರ್ಕಾರವು ನೀಡುತ್ತಿದ್ದ ನಾಣ್ಯವನ್ನೇ ತಮ್ಮ ರಾಜ್ಯಗಳಲ್ಲಿ ಬಳಸುತ್ತಿದ್ದರು. ಬಹುತೇಕ ಇವರುಗಳು ಬ್ರಿಟಿಷರ ಸಾಮಂತ ರಾಜರಾಗಿದ್ದರು. ಇವರುಗಳ ಪೈಕಿ, ಹಿಂದುಳಿದ ಜಾತಿಗಳಿಗೆ ಸೇರಿದವರೂ ಕೆಲವರು ರಾಜ್ಯವಾಳುತ್ತಿದ್ದರು. ಅವರಲ್ಲಿ ಕೊಲ್ಹಾಪುರ ಸಂಸ್ಥಾನದ ಛತ್ರಪತಿ ಶಾಹೂ ಮಹಾರಾಜ ಮತ್ತು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಹಿಂದುಳಿದ ಜಾತಿಗಳಿಗೆ ಸೇರಿದ ಅರಸರಾಗಿದ್ದರು. ಜುಲೈ 26, 1902 ರಂದು ಶಾಹೂ ಮಹಾರಾಜರು ಅವರ ಸಂಸ್ಥಾನದಲ್ಲಿ ಹಿಂದುಳಿದ ಜಾತಿಗಳಿಗೆ ನೌಕರಿಯಲ್ಲಿ ಶೇ 50 ರಷ್ಟು ಮೀಸಲಾತಿಯನ್ನು ನೀಡಿದ್ದರು ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್, ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಿದ್ದರು. ಇದೇ ಸೌಲಭ್ಯಗಳನ್ನು ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರು ಶೇ. 75 ರಷ್ಟು ಮೀಸಲಾತಿಯನ್ನು ತಮ್ಮ ಸಂಸ್ಥಾನದಲ್ಲಿ ಅನುಸರಿಸಿದರು. ಬ್ರಿಟಿಷ್ ಭಾರತದ ಆಡಳಿತವನ್ನು ಲಂಡನ್‌ನಲ್ಲಿದ್ದ ಸಂಸತ್ತಿನ ಮೂಲಕ ನೇರವಾಗಿ ನಡೆಸಲಾಗುತ್ತಿತ್ತು. ಬ್ರಿಟಿಷ್ ರಾಣಿಯ ಪ್ರತಿನಿಧಿಯಾಗಿ ಇಲ್ಲಿ ವೈಸ್‌ರಾಯ್‌ರವರು ಆಡಳಿತಾಧಿಕಾರಿಯಾಗಿದ್ದರು. 2011ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಕ್ರಮವಾಗಿ ಪರಿಶಿಷ್ಟ ಜಾತಿ....%ರಷ್ಟು ಮತ್ತು ಪರಿಶಿಷ್ಟ ಪಂಗಡದವರು 8.6% ರಷ್ಟಿದೆ. ಸಂವಿಧಾನ(ಪರಿಶಿಷ್ಟ ಜಾತಿ) ಆದೇಶ 1950 ತನ್ನ ಮೊದಲ ವೇಳಾಪಟ್ಟಿಯಲ್ಲಿ 22 ರಾಜ್ಯಗಳಲ್ಲಿ 744 ಬುಡಕಟ್ಟು ಜನಾಂಗವನ್ನು ಪಟ್ಟಿಮಾಡಿದೆ. ಭಾರತದ ಸ್ವಾತಂತ್ರ್ಯದ ನಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಾಜಕೀಯ ಪ್ರಾತಿನಿಧ್ಯವನ್ನು ಖಾತರಿಪಡಿಸುವ ಮೂಲಕ ಮೀಸಲಾತಿ ಸ್ಥಾನಮಾನ ನೀಡಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಕಾರಾತ್ಮಕ ತಾರತಮ್ಯದ ಸಾಮಾನ್ಯ ತತ್ವಗಳನ್ನು ಸಂವಿಧಾನವು ತಿಳಿಸುತ್ತದೆ.

ಭಾರತದಲ್ಲಿ ವರ್ಗಗಳ ಶ್ರೇಣೀಕರಣವಾಗಿ ಜಾತಿ ವ್ಯವಸ್ಥೆಯು ಸುಮಾರು 3,000 ವರ್ಷಗಳ ಹಿಂದೆ ಹುಟ್ಟಿಕೊಂಡಿತು. ಮೊಘಲ್ ಸಾಮ್ರಾಜ್ಯ ಮತ್ತು ಬ್ರಿಟಿಷ್ ರಾಜ್ ಸೇರಿದಂತೆ ದೇಶಿಯ ರಾಜವಂಶಗಳು ಮತ್ತು ಆಡಳಿತ ಗಣ್ಯರಿಂದ ಪ್ರಭಾವಿತವಾಗಿದೆ. ಹಿಂದೂ ವರ್ಣದ ಪರಿಕಲ್ಪನೆಯ ಆಧಾರದ ಮೇಲೆ ಐತಿಹಾಸಿಕವಾಗಿ ಜಾತಿ ಆಧಾರಿತ ಸಾಮಾಜಿಕ ವರ್ಗಗಳನ್ನು ಸಂಯೋಜಿಸಲಾಗಿದೆ. ಆಧುನಿಕ ಪರಿಶಿಷ್ಟ ಜಾತಿಗಳನ್ನು ಹೊಂದಿರುವ "ಅಸ್ಪೃಶ್ಯರು" ಎಂದು ಕರೆಯಲ್ಪಡುವ ಕೆಲವು ಕೆಳಜಾತಿಯ ಗುಂಪುಗಳನ್ನು ಸಾಮಾಜಿಕ ಶ್ರೇಣಿಯ ವರ್ಣ ವ್ಯವಸ್ಥೆಯ ಹೊರಗೆ ಪರಿಗಣಿಸಲಾಗಿತ್ತು. 1850ರ ದಶಕದಿಂದ ಈ ಸಮುದಾಯಗಳನ್ನು ಅಸ್ಪೃಶ್ಯ

ಹಾಗೂ ಬುಡಕಟ್ಟು ಜನರು ದೌರ್ಜನ್ಯಕ್ಕೆ ಒಳಗಾದ ವರ್ಗಗಳು ಎಂದು ಕರೆಯಲಾಗುತ್ತಿತ್ತು. 1861 ರಿಂದ ಹತ್ತು ವರ್ಷಕ್ಕೊಮ್ಮೆ ಜನಗಣತಿ ಆರಂಭವಾಗಿತ್ತು. ಮೊದಲಿಗೆ ಹಿಂದೂ, ಮುಸ್ಲಿಂ, ಕ್ರೈಸ್ತರು ಎಂಬ ಧಾರ್ಮಿಕ ವಿಂಗಡಣೆಯೊಂದಿಗೆ ಆರಂಭವಾದ ಈ ಜನಗಣತಿಯು 1901 ರ ವೇಳೆಗೆ ಜಾತಿವಾರು ವಿಂಗಡಣೆಯಾಗಿ ನಡೆಯತೊಡಗಿತ್ತು. ಈ ಜನಗಣತಿಯಲ್ಲಿ ಹೊಲೆಯ, ಮಾದಿಗ, ಸಮಗಾರ, ಕುರುಬ, ಕುಂಬಾರ, ಗೊಲ್ಲ, ಬೆಸ್ತ ಮುಂತಾದ ಆರು ಸಾವಿರಗಳ ಜಾತಿಗಳು 'ಶೋಷಿತ ವರ್ಗಗಳು' ಎಂಬ ಒಂದೇ ಹೆಸರಿನಲ್ಲಿ ದಾಖಲಾಗಿದ್ದವು. ಆದರೆ ಆ ಜಾತಿಗಳು ಹಿಂದೂ ಧರ್ಮದ ಅಡಿಯಲ್ಲಿ ಸೇರಿದ್ದರಿಂದ ಹಿಂದೂಗಳ ಸಂಖ್ಯೆಯು ಎಲ್ಲರಿಗಿಂತ ಹೆಚ್ಚಾಗಿತ್ತು. ಆದ್ದರಿಂದ ಶಾಸನ ಸಭೆಗಳಲ್ಲಿ ಹಿಂದೂಗಳ ಪ್ರಾತಿನಿಧ್ಯವು ಹೆಚ್ಚಿತು. ಆದರೆ, ಹಿಂದೂಗಳ ಹೆಸರಿನಲ್ಲಿ ಅಲ್ಪಸಂಖ್ಯಾತರಾದ ಬ್ರಾಹ್ಮಣ, ಠಾಕೂರ್, ಮಾರವಾಡಿಗಳೇ ಎಲ್ಲಾ ಸ್ಥಾನಗಳನ್ನು ಆಕ್ರಮಿಸಿಕೊಂಡಿದ್ದರು. ಈ ಹಿಂದೂಗಳಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡು ತಮ್ಮದೇ ಆದ ಸ್ವತಂತ್ರ ಸ್ಥಾನಗಳನ್ನು ಪಡೆಯಲು ಹಿಂದುಳಿದವರು ತೀರ್ಮಾನಿಸಿಕೊಂಡರು.

ಹಿಂದುಳಿದವರ ಈ ನ್ಯಾಯಸಮ್ಮತವಾದ ಬೇಡಿಕೆಯನ್ನು ಮುಸ್ಲಿಮರೂ ಪುರಸ್ಕರಿಸಿದರು. ಇದರಿಂದಾಗಿ 1911 ರಲ್ಲಿ ನಡೆದ ಜನಗಣತಿಯಲ್ಲಿ ಹಿಂದೂಗಳು ಮತ್ತು ನೂರಕ್ಕೆ ನೂರರಷ್ಟು ಹಿಂದೂಗಳಲ್ಲದವರು ಎಂದು ಪ್ರಮುಖವಾಗಿ ಎರಡು ಭಾಗಗಳನ್ನು ಮಾಡಲಾಯಿತು. ಅದು ಇಂತಿದೆ: 1. ಅಸ್ಪೃಶ್ಯರು 2. ಆದಿವಾಸಿಗಳು 3. ನಿಸರ್ಗೋಪಾಯಗಳು ಎಂದು ಮೂರು ಪಂಗಡಗಳನ್ನಾಗಿ ಮಾಡಲಾಯಿತು. ಇವರ ಪೈಕಿ ಅಸ್ಪೃಶ್ಯ ಜಾತಿಗಳೆಂದು 429 ಸಮುದಾಯಗಳನ್ನು ಗುರುತಿಸಲಾಗಿತ್ತು. ಈ ಅಸ್ಪೃಶ್ಯ ಸಮುದಾಯಗಳ ಒಟ್ಟು ಜನಸಂಖ್ಯೆಯು (1931 ರ ಜನಗಣತಿ) 5 ರಿಂದ 6 ಕೋಟಿ ಇತ್ತು. ಈ ಅಸ್ಪೃಶ್ಯ ಜಾತಿಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರ ಆಗಮನದೊಂದಿಗೆ ಪ್ರಬಲ ರಾಜಕೀಯ ಶಕ್ತಿಯಾಗತೊಡಗಿತ್ತು. 20ನೇ ಶತಮಾನದ ಆರಂಭದಲ್ಲಿ ಭಾರತಕ್ಕೆ ಜವಾಬ್ದಾರಿಯುತವಾದ ಸ್ವ-ಸರಕಾರದ ಕಾರ್ಯಸಾಧ್ಯತೆಯನ್ನು ನಿರ್ಣಯಿಸುವಲ್ಲಿ ಬ್ರಿಟಿಷ್ ಅಧಿಕಾರಿಗಳಲ್ಲಿ ಚಟುವಟಿಕೆಯ ಅಬ್ಬರವಿತ್ತು. ನಂತರದಲ್ಲಿ ಮಾರ್ಲೆ ಮಿಂಟೋ (1909) ಸುಧಾರಣಾ ವರದಿ, ಮಾಂಟೆಗೂ ಚೆಮ್ಸ್‌ಫರ್ಡ್ ಸುಧಾರಣಾ (1919) ವರದಿ ಮತ್ತು ಸೈಮನ್ ಆಯೋಗ (1928) ಈ ಸಂದರ್ಭದಲ್ಲಿ ಹಲವಾರು ಉಪಕ್ರಮಗಳಾಗಿವೆ. ಪ್ರಾಂತೀಯ ಮತ್ತು ಕೇಂದ್ರ ಶಾಸಕಾಂಗಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ವರ್ಗಗಳ ಪ್ರಾತಿನಿಧ್ಯಕ್ಕಾಗಿ ಸ್ಥಾನಗಳನ್ನು ಕಾಯ್ದಿರಿಸುವುದು ಪ್ರಸ್ತಾವಿತ ಸುಧಾರಣೆಗಳಲ್ಲಿ ಹೆಚ್ಚು ಸ್ಪರ್ಧಾತ್ಮಕ ವಿಷಯವಾಗಿತ್ತು.

ಭಾರತ ಸರಕಾರದ ಸಂಸತ್ತಿನಲ್ಲಿ 1935 ರ ಕಾಯ್ದೆಯನ್ನು ಅಂಗೀಕರಿಸಿತು. ಇದು ಭಾರತೀಯ ಪ್ರಾಂತ್ಯಗಳಿಗೆ ಹೆಚ್ಚಿನ ಸ್ವ-ಆಡಳಿತವನ್ನು ನೀಡಲು ಮತ್ತು ರಾಷ್ಟ್ರೀಯ ಫೆಡರಲ್ ರಚನೆಯನ್ನು ಸ್ಥಾಪಿಸಲು ವಿನ್ಯಾಸಗೊಳಿಸಲಾಗಿದೆ. 1937 ರಲ್ಲಿ ಜಾರಿಗೆ ತಂದ ಈ ಕಾಯ್ದೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ವರ್ಗಗಳಿಗೆ ಸ್ಥಾನಗಳ ಮೀಸಲಾತಿಯನ್ನು ಸೇರಿಸಲಾಯಿತು. ಈ ಕಾಯ್ದೆಯು "ಪರಿಶಿಷ್ಟ ಜಾತಿ" ಎಂಬ

ಪದವನ್ನು ಪರಿಚಯಿಸಿತು. ಈ ಹಿಂದೆ "ಶೋಷಿತ ವರ್ಗಗಳು" ಎಂದು ಕರೆಯಲ್ಪಡುವ ವ್ಯಕ್ತಿಗಳ ವರ್ಗಗಳ ಅನುಗುಣವಾಗಿ ಅವರ ಮೆಜೆಸ್ಟಿ ಕೌನ್ಸಿಲ್‌ನಲ್ಲಿ ಆದ್ಯತೆ ನೀಡಬಹುದು.

ಸ್ವಾತಂತ್ರ್ಯದ ನಂತರ ಸಂವಿಧಾನ ಸಭೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರ ವ್ಯಾಖ್ಯಾನವನ್ನು ಮುಂದುವರೆಸಿತು. ಭಾರತದ ಅಧ್ಯಕ್ಷ ಮತ್ತು ರಾಜ್ಯಗಳ ಗವರ್ನರ್‌ಗಳು ಜಾತಿ ಮತ್ತು ಬುಡಕಟ್ಟು ಜನಾಂಗದವರ ಸಂಪೂರ್ಣ ಪಟ್ಟಿಯನ್ನು ಕಂಪೈಲ್ ಮಾಡುವ ಆದೇಶವನ್ನು ನೀಡಿದರು. ಜಾತಿ ಮತ್ತು ಬುಡಕಟ್ಟು ಜನಾಂಗದವರ ಸಂಪೂರ್ಣ ಪಟ್ಟಿಯನ್ನು ಎರಡು ಆದೇಶಗಳ ಮೂಲಕ ಮಾಡಲಾಗಿದೆ. ಸಂವಿಧಾನ ಆದೇಶದ ಪ್ರಕಾರ ಪರಿಶಿಷ್ಟ ಜಾತಿ 1950 ಮತ್ತು ಪರಿಶಿಷ್ಟ ಪಂಗಡ 1950 ಕ್ರಮವಾಗಿ ಇದಲ್ಲದೆ, ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ನೇಮಿಸುವ ಮೂಲಕ ಸ್ವತಂತ್ರ ಭಾರತದ ಒಳಗೊಳ್ಳುವಿಕೆ ಅನ್ವೇಷಣೆಯಾಗಿದೆ. ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ ಸಾಂವಿಧಾನಿಕ ಹಕ್ಕುಗಳ ಪ್ರಬಲ ಪ್ರತಿಪಾದಕರಾಗಿದ್ದರು. ಸಂವಿಧಾನದಲ್ಲಿನ ನಿಬಂಧನೆಗಳನ್ನು ಜಾರಿಗೆ ತರಲು ಹಲವಾರು ಕಾನೂನುಗಳನ್ನು ಜಾರಿಗೆ ತರಲಾಯಿತು. ಅಂತಹ ಕಾನೂನುಗಳು–ಅಸ್ಪೃಶ್ಯತೆ ಆಚರಣೆ ವಿರೋಧಿ (ಭಾರತೀಯ ನಾಗರಿಕ) ಕಾಯ್ದೆ 1955, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ 1989, ಹಸ್ತಚಾಲಿತ ಸ್ಕ್ಯಾವೆಂಜರ್‌ಗಳ ಉದ್ಯೋಗ ಮತ್ತು ಒಣ ಶೌಚಾಲಯಗಳ ನಿರ್ಮಾಣ (ನಿಷೇಧ) ಕಾಯ್ದೆ 1993 ಹೀಗೆ ಮೊದಲಾದ ಕಾಯ್ದೆಗಳನ್ನು ಜಾರಿಗೆ ತರಲಾಯಿತು.

**ಭಾರತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಂವಿಧಾನಿಕ ಕಾಯ್ದೆಗಳು:** ಮೂಲ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಾಂವಿಧಾನಿಕ ಮತ್ತು ಶಾಸಕಾಂಗ ಸುರಕ್ಷತೆಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ರಾಷ್ಟ್ರಾಧ್ಯಕ್ಷರಿಗೆ ವರದಿ ಮಾಡುವ ಜವಾಬ್ದಾರಿಯುತ ವಿಶೇಷ ಅಧಿಕಾರಿಗೆ 338 ನೇ ವಿಧಿ ಒದಗಿಸಲಾಗಿದೆ. ಆಯುಕ್ತರು ಹದಿನೇಳು ಪ್ರಾದೇಶಿಕ ಕಚೇರಿಗಳನ್ನು ದೇಶಾದ್ಯಂತ ಸ್ಥಾಪಿಸಲಾಯಿತು. ಸಂವಿಧಾನದ 48 ನೇ ತಿದ್ದುಪಡಿಯಲ್ಲಿ 338 ನೇ ಪರಿಚ್ಛೇದವನ್ನು ಬದಲಾಯಿಸುವ ಮೂಲಕ ಆಯುಕ್ತರನ್ನು ಬದಲಿಸಲು ಒಂದು ಉಪಕ್ರಮವಿತ್ತು. ತಿದ್ದುಪಡಿ ಚರ್ಚೆಯಾಗುತ್ತಿರುವಾಗ ಕಲ್ಯಾಣ ಸಚಿವಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಮೊದಲು ಸಮಿತಿಯನ್ನು ಆಗಸ್ಟ್ 1978 ರಲ್ಲಿ ಸ್ಥಾಪಿಸಿತು. ವಿಶಾಲ ನೀತಿ ವಿಷಯಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕುರಿತು ಸರಕಾರಕ್ಕೆ ಸಲಹೆಗಳನ್ನು ನೀಡುವುದರ ಮೂಲಕ 1987 ರ ಸೆಪ್ಟೆಂಬರ್‌ನಲ್ಲಿ ಈ ಕಾರ್ಯಗಳನ್ನು ಮಾರ್ಪಡಿಸಲಾಯಿತು. ಈಗ ಇದನ್ನು ಆರ್ಟಿಕಲ್ 342 ರಲ್ಲಿ ಸೇರಿಸಲಾಗಿದೆ. 1990 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗಕ್ಕೆ ಸಂವಿಧಾನ (ಅರವತ್ತೈದು ತಿದ್ದುಪಡಿ) ಮಸೂದೆ 1990 ರೊಂದಿಗೆ ಆರ್ಟಿಕಲ್ 338 ಅನ್ನು ತಿದ್ದುಪಡಿ ಮಾಡಲಾಯಿತು.

ಭಾರತದ ಬ್ರಿಟಿಷ್ ಆಡಳಿತದಲ್ಲಿ ಮತಾಂತರ ನಿಷೇಧ ಕಾಯ್ದೆ ಇರಲಿಲ್ಲ. ಆದರೆ ಅನೇಕ ರಾಜ ಸಂಸ್ಥಾನಗಳು ತಮ್ಮದೇ ಮತಾಂತರ ನಿಷೇಧ ಕಾಯ್ದೆಗಳನ್ನು ಹೊಂದಿದ್ದವು. ಉದಾಹರಣೆಗೆ ರಾಯಗಢ ರಾಜ್ಯ ಮತಾಂತರ ಕಾಯ್ದೆ 1936, ಪಾಟ್ನಾ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ 1942, ಸರ್ಗುಜಾ ಸ್ಟೇಟ್ ಅಪೋಸ್ಟಸಿ ಆಕ್ಟ್ 1945 ಮತ್ತು ಉದಯಪುರ ಸ್ಟೇಟ್ ಆಂಟಿ ಕನ್ವರ್ಷನ್ ಆಕ್ಟ್ 1946 ಇಂಥವೇ ಕಾಯ್ದೆಗಳು ಬಿಕಾನೇರ್, ಜೋಧಪುರ, ಕಾಳಾಹಂಡಿ ಮತ್ತು ಕೋಟಾ ಸಂಸ್ಥಾನಗಳಲ್ಲಿ ಜಾರಿಯಲ್ಲಿದ್ದವು. ಆದರೆ ಇವರ ಕಾಯ್ದೆಗಳು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವುದಕ್ಕೆ ವಿರುದ್ಧವಾಗಿದ್ದವು.

ಸ್ವಾತಂತ್ರ್ಯದ ನಂತರ ಮತಾಂತರ ನಿಷೇಧ ಕಾಯ್ದೆಗಳನ್ನು ರಚಿಸುವ ಹೊಣೆಗಾರಿಕೆಯನ್ನು ಸಂಸತ್ತು ತೆಗೆದುಕೊಂಡಿತು. 1945 ರಲ್ಲಿ ದ ಇಂಡಿಯನ್ ಕನ್ವರ್ಷನ್ ಬಿಲ್ ಮತ್ತು 1960 ರಲ್ಲಿ ಬ್ಯಾಕ್‌ವರ್ಡ್ ಕಮ್ಯುನಿಟಿಸ್ ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಬೆಂಬಲ ಸಿಗದ ಕಾರಣ ಎರಡೂ ಮಸೂದೆಗಳು ಬಿದ್ದು ಹೋದವು. 1979 ಉದ್ದೇಶಿತ ಧಾರ್ಮಿಕ ಸ್ವಾತಂತ್ರ್ಯ ಮಸೂದೆಯನ್ನು ಅಲ್ಪ ಸಂಖ್ಯಾತರ ಆಯೋಗವೇ ವಿರೋಧಿಸಿತು. ಮಸೂದೆ ಪಕ್ಷಪಾತವಾಗಿತ್ತೆಂಬುದು ಆಯೋಗದ ಆರೋಪವಾಗಿತ್ತು. 1968–69 ರಲ್ಲಿ ಒರಿಸ್ಸಾ ಮತ್ತು ಮಧ್ಯ ಪ್ರದೇಶದ ಧರ್ಮ ಸ್ವಾತಂತ್ರ್ಯ ಕಾಯ್ದೆ 1978 ರಲ್ಲಿ ಜಾರಿಗೆ ಬಂದಿತು. ಈ ಎಲ್ಲಾ ಕಾಯ್ದೆಗಳು ಒತ್ತಾಯದ ಅಥವಾ ಆಮಿಷದ ಮತಾಂತರವೆಂದು ಕ್ರೈಸ್ತರನ್ನು ವಿರೋಧಿಸಿತು. ನಂತರದಲ್ಲಿ 65ನೇ ತಿದ್ದುಪಡಿಯಲ್ಲಿ ಮೊದಲ ಆಯೋಗವನ್ನು 1992 ರ ಮಾರ್ಚ್‌ನಲ್ಲಿ ರಚಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಯುಕ್ತರನ್ನು ಮತ್ತು 1989 ರ ಕಲ್ಯಾಣ ಸಚಿವಾಲಯದ ನಿರ್ಣಯದಿಂದ ಸ್ಥಾಪಿಸಲ್ಪಟ್ಟ ಆಯೋಗವನ್ನು ಬದಲಾಯಿಸಲಾಯಿತು. 2003 ರಲ್ಲಿ ಸಂವಿಧಾನವನ್ನು ಮತ್ತೆ ಪರಿಷ್ಕರಿಸಲಾಯಿತು ಮತ್ತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಎರಡು ಆಯೋಗಗಳಾಗಿ ವಿಂಗಡಿಸಲಾಯಿತು. ಒಂದನೆಯದಾಗಿ "ಪರಿಶಿಷ್ಟ ಜಾತಿ ರಾಷ್ಟ್ರೀಯ ಆಯೋಗ" ಮತ್ತು ಎರಡನೆಯದಾಗಿ "ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗ". ಹೀಗೆ ಎರಡು ಆಯೋಗವನ್ನು ರಚಿಸಿದ್ದರಿಂದ ಇಲ್ಲಿ ಕ್ರಿಶ್ಚಿಯನ್ ಧರ್ಮ ಮತ್ತು ಇಸ್ಲಾಂ ಧರ್ಮದ ಹರಡುವಿಕೆಯಿಂದಾಗಿ ಮತಾಂತರಗೊಂಡ ಜಾತಿ ಸಮುದಾಯವನ್ನು ಭಾರತೀಯ ಮೀಸಲಾತಿ ನೀತಿಯಡಿಯಲ್ಲಿ ಜಾತಿಗಳಾಗಿ ರಕ್ಷಿಸಲಾಗುವುದಿಲ್ಲ. ಆದ್ದರಿಂದ ಈ ಸಮಾಜಗಳು ಸಾಮಾನ್ಯವಾಗಿ ತಮ್ಮ ಸಮುದಾಯ ಪ್ರಮಾಣ ಪತ್ರವನ್ನು ಹಿಂದೂಗಳೆಂದು ನಕಲಿ ಮಾಡುತ್ತವೆ ಮತ್ತು ಕ್ರಿಶ್ಚಿಯನ್ ಧರ್ಮ ಅಥವಾ ಇಸ್ಲಾಂ ಧರ್ಮವನ್ನು ತಮ್ಮ ಮೀಸಲಾತಿ ನಷ್ಟಕ್ಕೆ ಹೆದರುತ್ತವೆ.

ಸಂವಿಧಾನ ಕಾಯ್ದೆ ಜಾರಿಗೆ ಬಂದರೂ ದೌರ್ಜನ್ಯಮುಕ್ತ ಸಮಾಜವಾಗುವುದು ಯಾವಾಗ?: ನಾವೆಲ್ಲರೂ ಭಾರತೀಯರು, ಮೇರಾ ಭಾರತ್ ಮಹಾನ್ ಹೈ, ಜಾತ್ಯತೀತ ಪ್ರಜಾಸತ್ತಾತ್ಮಕ, ಸಾರ್ವಭೌಮ ಸಮಾಜವಾದಿ ರಾಷ್ಟ್ರವೆಂದು ಹೇಳುತ್ತೇವೆ. ನಿಜ ಆದರೆ ವಾಸ್ತವವಾಗಿ ಈ ದೇಶದ ಜನ ಸಮೂಹದಲ್ಲಿ ಒಂದು ಭಾಗವಾದ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯವನ್ನು ರಾಷ್ಟ್ರದ ಏಕತೆ ವ್ಯಾಪ್ತಿಯಿಂದ ಹೊರಗಿಡುವ ಮೂಲಕ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳಲಾಗುತ್ತಿದೆ. ಸಂವಿಧಾನದ ಅನುಚ್ಛೇದ 14 ಕಾನೂನಿನ ಮುಂದೆ ಎಲ್ಲರೂ ಸಮಾನರೆಂದು ಸಾರಿದರೆ, ಯಾವುದೇ ಧರ್ಮ ಲಿಂಗ, ಜಾತಿ, ಭಾಷೆ ಸ್ಥಳದ ಆಧಾರದ ಮೇಲೆ ತಾರತಮ್ಯ ಮಾಡುವುದು ಶಿಕ್ಷಾರ್ಹ ಅಪರಾಧವೆಂದು ಹೇಳುತ್ತದೆ. ಅನುಚ್ಛೇದ 17 ಅಸ್ಪೃಶ್ಯತೆ ಆಚರಣೆ ನಿಷೇಧಿಸಿ ಅಪರಾಧವೆಂದು ಸ್ಪಷ್ಟಪಡಿಸಿದ್ದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಮೇಲೆ ರಾಷ್ಟ್ರವ್ಯಾಪ್ತಿ ಕೊಲೆ, ಬಲಾತ್ಕಾರ, ಅತ್ಯಾಚಾರ, ಸಾಮಾಜಿಕ ಬಹಿಷ್ಕಾರದಂತಹ ಸಾಮಾಜಿಕ ದೌರ್ಜನ್ಯಗಳು ಎಗ್ಗಿಲ್ಲದೆ ನಡೆಯುತ್ತಿದೆ.

ಭಾರತದಲ್ಲಿ ಜಾತಿ ದೌರ್ಜನ್ಯಗಳು ದಲಿತರ ಬಾಳಿನಲ್ಲಿ ಅಂತರ್ಗತವಾಗಿರುವ ಲಕ್ಷಣವಾಗಿದೆ. ಸರಕಾರಗಳು ಪ್ರತಿವರ್ಷವೂ ಈ ದೌರ್ಜನ್ಯಗಳ ಅಂಕಿಅಂಶಗಳನ್ನು ಸಂಗ್ರಹಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗಗಳು ಬಿಡುಗಡೆ ಮಾಡುವ ವಾರ್ಷಿಕ ವರದಿಯ ಮೂಲಕ ಸಾರ್ವಜನಿಕರಿಗೆ ಬಿಡುಗಡೆ ಮಾಡುತ್ತದೆ. ಭಾರತದ ಸಂವಿಧಾನದಲ್ಲಿ ಜಾತಿ ದೌರ್ಜನ್ಯವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಮೂರು ಪರಿಚ್ಛೇದಗಳನ್ನು ಗುರುತಿಸಬಹುದು. ಪರಿಚ್ಛೇದ 15, 17 ಮತ್ತು 23. ಈ ಸಾಂವಿಧಾನಿಕ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೆಲವು ಕಾಯ್ದೆಗಳನ್ನು ಜಾರಿಗೊಳಿಸಲಾಗಿದೆ. 1. ಅಸ್ಪೃಶ್ಯತಾ (ಅಪರಾಧಗಳ) ಕಾಯ್ದೆ 1955. ಈ ಕಾಯ್ದೆಯನ್ನು ತಿದ್ದುಪಡಿ ಮಾಡಿ ನಾಗರಿಕ ಹಕ್ಕುಗಳ ರಕ್ಷಣಾ ಕಾಯ್ದೆ 1955 ರಲ್ಲಿ ಎಂದು ಜಾರಿಗೊಳಿಸಲಾಗಿದೆ. 2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧಕ) ಕಾಯ್ದೆ 1989 ಮತ್ತು 3. ಜೀತ ಕಾರ್ಮಿಕ ವ್ಯವಸ್ಥೆ (ನಿರ್ಮೂಲನೆ) ಕಾಯ್ದೆ 1970. ಜನಾಂದೋಲನದ ಮೂಲಕ ದೌರ್ಜನ್ಯಕ್ಕೆ ಬಲಿಯಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಕೂಡಲೇ ಧನ ಪರಿಹಾರ ನೀಡಬೇಕು, ದೌರ್ಜನ್ಯ ಎಸಗಿರುವ ದುಷ್ಕರ್ಮಿಗಳ ವಿರುದ್ಧ ಸರಿಯಾಗಿ ವಿಚಾರಣೆ ನಡೆಸಿ, ಶಿಕ್ಷೆಗೆ ಗುರಿಪಡಿಸಬೇಕು.

**ಉಪಸಂಹಾರ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಲ್ಲಿ ಉಲ್ಲೇಖಿಸಿರುವಂತೆ ಪ್ರತಿ ಜಿಲ್ಲೆಗೆ ತನಿಖಾಧಿಕಾರಿಗಳನ್ನು ನೇಮಿಸಬೇಕು, ದೌರ್ಜನ್ಯದ ಪ್ರಕರಣಗಳನ್ನು ವಿಲೇವಾರಿ ಮಾಡಲು ಜಿಲ್ಲೆಗೊಂದರಂತೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಮತ್ತು ತ್ವರಿತ ವಿಲೇವಾರಿ ಕೋರ್ಟುಗಳನ್ನು ಸ್ಥಾಪಿಸಬೇಕು ಮತ್ತು 'ರಾಜ್ಯ ಜಾಗೃತ ಮತ್ತು ಮೇಲ್ವಿಚಾರಣೆ ಸಮಿತಿ' ಹಾಗೂ 'ಜಿಲ್ಲಾ ಜಾಗೃತ ಮತ್ತು ಮೇಲ್ವಿಚಾರಣೆ ಸಮಿತಿ'ಗಳು ನಿಗದಿತ ಸಮಯಗಳಲ್ಲಿ ಸಭೆ ಸೇರಬೇಕು. ಕಾಯ್ದೆಯ ಮೂಲಕ ಇಷ್ಟೆಲ್ಲಾ ಇದ್ದರೂ ಕೂಡಾ ದಿನದಿಂದ ದಿನಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯವೂ ಹೆಚ್ಚುತ್ತಲೇ ಇದೆ. ಕೆಲವೂ ಕಡೆ ದಾಖಲಾದರೆ ಇನ್ನೂ ಕೆಲವು ಕಡೆ ದೌರ್ಜನ್ಯವನ್ನು ಮುಚ್ಚಿ ಹಾಕಲಾಗಿದೆ. ಆದರೂ 'ನವಜೀವನ ಆಂದೋಲನ' ಇದೆಲ್ಲವೂ ಈಗ ಇರುವ

ಕಾಯ್ದೆಯನ್ವಯ ಆಗಬೇಕಾದ ಅವಶ್ಯಕ ಕಾರ್ಯಕ್ರಮಗಳು. ಈ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ದೌರ್ಜನ್ಯಗಳಿಗೆ ಬಲಿಯಾಗದಂತಹ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂತಹ ಮತ್ತು ದೌರ್ಜನ್ಯಮುಕ್ತ ಸಮಾಜವನ್ನು ನಿರ್ಮಿಸುವತ್ತ ನಾವೆಲ್ಲರೂ ತಯಾರಾಗಬೇಕಾಗಿದೆ.

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ನಾಗರಿಕ ಬಂಧುಗಳಾದ ನಾವೆಲ್ಲ ಒಂದೇ ದೇಶದ ಸಮಾನ ಹಕ್ಕುಳ್ಳ ಪ್ರಜೆಗಳು, ದೇಶದ ಏಕತೆಗೆ ಧಕ್ಕೆ ತರುವಂತಹ ಹೀನ ಕೃತ್ಯಗಳನ್ನು ನಿಲ್ಲಿಸುವಂತೆ ಇಡೀ ಸಮಾಜದ ಪರಿವರ್ತನೆಗಾಗಿ ಹಾಗೂ ಸರಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ನಿಯಂತ್ರಣ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ. ಹಾಗೆಯೇ ಈ ಸಮಾಜವನ್ನು ದೌರ್ಜನ್ಯ ಮುಕ್ತ ಸಮಾಜವನ್ನಾಗಿ ಮಾಡಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. Census of India 2011, Schedule Castes and Scheduled Tribes, Office of the Registrar General and Census Commissioner, Government of India, 28 Oct, 2013.
2. "Scheduled Caste Welfare – List of Scheduled Castes", Ministry of Social Justice and Empowerment, Archived from the original on 13 Sep, 2012. Re–trieved 16 Aug, 2012.
3. "2011 Census Primary Census Abstract", Censusindia.nic.in. Retrieved 1 Oct, 2017.
4. "Half of India's Dalit Population Lives in 4 States", Times of India, India–times.com. Retrieved 1 Oct, 2017.
5. "Text of the Constitution (Scheduled Castes) Order, 1950, as Amended", Lawmin.nic.in. Retrieved 1 Oct, 2017.
6. "What is India's Caste System?", 20 July, 2017. Retrieved 6 April, 2019.
7. Bayly, Susan (July 1999), "Caste Society and Politics in India from the Eighteenth Century to the Modern Age by Bayly Susan", Cambridge Core. Retrieved 6 April, 2019.
8. "Civil Rights/Society", Encyclopaedia Britannica. Retrieved 6 April, 2019.
9. "Jati: The Caste System in India", Asia Society. Retrieved 6 April, 2019.

10. “Scheduled Communities: A Social Development Profile of SC/ST’s (Bihar, Jharkhand & West Bengal)”, Planningcommission.nic.in. Retrieved 1 Oct, 2017.
11. “The Constitution (Scheduled Castes) Order, 1950”, Lawmin.nic.in.
12. “The Constitution (Scheduled Tribes)”, Lawmin.nic.in. Archived from the original on 20 Sep, 2017.
13. Metcalf, Barbara D., Thomas R., “A Concise History of Modern India”, New York, 2012, Cambridge, p–232, ISBN 978–1–107–67218–5.
14. “Constitution of India as of 29 Jul 2008”, The Constitution of India, Ministry of Law and Justice, Archived from the original on 9 Sep, 2014. Retrieved 13 April, 2011.
15. “Community Status Lapses on Conversion, Rules Madras High Court”, The–hindu.com, 24 June, 2013. Retrieved 1 Oct, 2017.